ಸಿಸಿ ನಂಃ 3596/2023
ಸಿ.ಡಬ್ಲ್ಯೂ 1/ಪಿ.ಡಬ್ಲ್ಯೂ 2

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 3596/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಬ್ದುಲ ಕರಿಮ |
| ತಂದೆಯ ಹೆಸರು | ಃ | ನನ್ನೆಸಾಬ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ನವಲೂರಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 18-01-2025

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದೂರನ್ನು ನಾನೇ ನೀಡಿರುತ್ತೇನೆ. ಆರೋಪಿತರ ಪರಿಚಯ ಇರುತ್ತದೆ. ದಿಃ19-03-2023 ರಂದು ಸಂಜೆ ನಾನು ಮತ್ತು 1 ನೇ ಆರೋಪಿತ ನವಲೂರಿನ ಮಸಿದಿಯಲ್ಲಿ ರಾತ್ರಿ 9.15 ಕ್ಕೆ ನಮಾಜ ಮಾಡಲು ಹೋಗಿದ್ದೇವು. ನಾನು ಸದರಿ ಮಸಿದಿಯ ಸದಸ್ಯನಿದ್ದೇನು. 1 ನೇ ಆರೊಪಿತನು ನನ್ನನ್ನು ಮಸಿದಿ ಸದಸ್ಯನಿಂದ ತೆಗೆದು ಹಾಕಲು ಅರ್ಜಿಯನ್ನು ಕೊಟ್ಟಿದ್ದರು. ನಾನು ನನ್ನನ್ನು ಸದಸ್ಯತ್ವದಿಂದ ತೆಗೆಯಲು ಏಕೆ ಅರ್ಜಿಯನ್ನು ಕೊಟ್ಟಿರುತ್ತಿರಿ ಎಂದು ಕೇಳಿದರು. ಆಗ 1 ನೇ ಆರೊಪಿತ ನಾನೇ ಕೊಟ್ಟಿರುತ್ತೆನೆ ಎಂದು ಅವಾಚ್ಯಶಬ್ದಗಳಿಂದ ಬೈಯುತ್ತ ನನ್ನನ್ನು ಕೈ ಮುಷ್ಟಿಯಿಂದ ಹೊಡೆದಿರುತ್ತಾನೆ. 1 ನೇ ಆರೊಪಿತನ ಮಗನ ಹೆಸರು ನೆನಪಿರುವುದಿಲ್ಲ. 1 ನೇ ಆರೊಪಿತನ ಮಗ ಸಮೀರ ಸವಣೂರ ನನಗೆ ಕಟ್ಟಿಗೆಯಿಂದ ತಲೆಗೆ ಹೊಡೆದಿರುತ್ತಾನೆ. ವಿಜ್ಜು ಸವಣೂರ, ಆತನ ಸಹೋದರ ಇಬ್ಬರು ನನಗೆ ಕೈಯಿಂದ ಹೊಡೆದಿರುತ್ತಾರೆ. ಎಲ್ಲರೂ ಹೊಡೆದಿರುತ್ತಾರೆ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರಿ ಘಟನೆ ನಂತರ ನಾನು ಮನೆಗೆ ಹೋಗಿರುತ್ತೆನೆ. ಮೇಲೆ ಹೇಳಿದ ಆರೋಪಿತರು ನಮ್ಮ ಮನೆಗೆ ಬಂದು ನನ್ನನ್ನು ಸಿಕ್ಕಾಪಟ್ಟೆ ಕೈಯಿಂದ ಹೊಡೆದಿರುತ್ತಾರೆ. ಆರೋಪಿತರು ನಾನು ಹೊರಗೆ ಬಂದರೆ ಮುಗಿಸಿ ಬಿಡುತ್ತೆವೆ ಎಂದು ದಮ್ಕಿ ಹಾಕಿರುತ್ತಾರೆ.

ಆರೊಪಿತರು ಮಾಡಿದ ಹಲ್ಲೆಯಿಂದ ನನಗೆ ತಲೆ ಒಡೆದು ರಕ್ತ ಬರುತ್ತಿತ್ತು. ಆರೋಪಿತರು ನನ್ನನ್ನು ಮನೆ ಒಳಗಡೆ ಹಾಕಿ ಬಾಗಿಲು ಚೀಲಕ ಹಾಕಿಕೊಂಡು ಹೋಗಿದ್ದರು. ರಾತ್ರಿ 12.00 ಗಂಟೆಗೆ ಪೊಲೀಸರು ಬಂದು ಬಾಗಿಲದ ಚೀಲಕ ತೆಗೆದು ನನ್ನನ್ನು ಜಿಲ್ಲಾ ಆಸ್ಪತ್ರೆಗೆ ನನ್ನನ್ನು ಚಿಕಿತ್ಸೆಗೆ ಕಳುಹಿಸಿದರು. ವೈದ್ಯರು ನನ್ನ ಗಾಯಕ್ಕೆ ಹೊಲೀಗೆ ಹಾಕಿ ಮನೆಗೆ ಕಳುಹಿಸಿರುತ್ತಾರೆ. ದಿಃ20-03-2023 ರಂದು ಮದ್ಯಾಹ್ನ ದೂರು ನೀಡಿರುತ್ತೆನೆ. ಸಾಕ್ಷಿ ದೂರನ್ನುಗುರತಿಸಿದ್ದು ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೆನೆ. ಪೊಲೀಸರು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ನಾನು ದೂರು ನೀಡಿದ ದಿನಾಂಕದಂದು ಪಂಚನಾಮೆಯನ್ನು ಮಾಡಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಬಟ್ಟೆ ಮತ್ತು ಕಟ್ಟಿಗೆಯನ್ನು ಜಪ್ತು ಮಾಡಿರುತ್ತಾರೆ. ಒಂದು ಫಳಿ ತರ ಅಂದಾಜು 2 ಪೂಟ ಇತ್ತು ಮತ್ತು ಇನ್ನೊಂದು ಗುಂಡ ಕಟ್ಟಿಗೆ ಇತ್ತು ಅದು ಒಂದು ಮೊಳ ಇತ್ತು. ಅಂದಾಜು ನನಗೆ 11 ಜನ ಹೋಡೆದಿರುತ್ತಾರೆ. ಆರೊಪಿತರು ನನಗೆ ಹೋಡೆಯಲು ಉಪಯೋಗಿಸಿದ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೆನೆ. ದೂರನ್ನು ನೀಡಿದ ನಂತರ ನಾನು ಮರು ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಘಟನಾ ಸ್ಥಳವನ್ನು ತೋರಿಸಿದಗಾ ಸಂಜೆ 4.30 ಇಂದ 5.00 ಗಂಟೆ ಸಮಯವಾಗಿತ್ತು. ಈಗ ನೊಡುತ್ತಿರುವ ಎಮ್ ಓ.1 ನಮ್ಮ ಮನೆಯ ಮುಂದೆ ಅದರಿಂದ ಹೋಡೆದ ಕಟ್ಟಿಗೆ ಆಗಿರುತ್ತದೆ. ಎಮ್ ಓ.2 ಮಸಿದಿಯ ಮುಂದೆ ನನಗೆ ತಲೆಗೆ ಹೋಡೆದ ಕಟ್ಟಿಗೆ ಆಗಿರುತ್ತದೆ.

**ಹಿರಿಯ ಸರಕಾರಿ ಅಬಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಪಾಟೀ ಸವಾಲಿಗೆ ಅನೂಮತಿ ನೀಡಲಾಯಿತು.**

ಪಾಟೀ ಸವಾಲುಃ ಹಿಸಅಅ ರವರಿಂದ

ದಿಃ19-03-2023 ರಂದು ರಾತ್ರಿ 8.30 ಗಂಟೆಗೆ ನಮಾಜ ಹೋಗಿ 9.15 ಕ್ಕೆ ಮರಳಿ ವಾಪಸ್ಸು ಬರುತ್ತಿದ್ದಾಗ 1 ನೇ ಆರೊಪಿತರ ಅಲ್ಲಿಯೆ ನಿಂತಿದ್ದ ಆಗ ನಾನು ಆತನಿಗೆ ನನ್ನ

ಸದಸ್ಯತ್ವ ತೆಗೆಯಲು ಏಕೆ ಅರ್ಜಿ ಕೊಟ್ಟಿರುತ್ತಿರಿ ಎಂದು ಕೇಳಿದೆನು. ನನಗೆ ಇಜಾಜ ಸವಣೂರ, ಇಮ್ತಿಯಾಜ ಸವಣೂರ, ನವಜ ಸವಣೂರ, ಜಾಕೀರ ಹುಸೇನ, ಬಾಬು ಸವಣೂರ ಮತ್ತು ಇರ್ಶಾದ ಸವಣೂರ ಮತ್ತು ಮೇಹಪೂಜ ಸವಣೂರ ಎಲ್ಲರೂ ಸೇರಿ ನನಗೆ ಹೋಡಿದಿರುತ್ತಾರೆ ಎಂದು ದೂರಿನಲ್ಲಿ ಬರೆಯಿಸಿರುತ್ತೆನೆ ಎಂದರೆ ಸರಿ. ಆರೋಪಿ 2 ಮತ್ತು 3 ರವರು ಇಬ್ಬರೂ ಸೇರಿಕೊಂಡು ನನಗೆ ನನ್ನ ತಿಂಡಿ ಬಹಳ ಆಗಿರುತ್ತದೆ ನನಗೆ ಈ ಹಲಕಟ ಸುಳೆಮಗನನ್ನು ಮುಗಿಸೆ ಬಿಡೋಣಾ ಎಂದು ಎಮ್ ಓ.1 ಮತ್ತು 2 ರಿಂದ ಹೋಡೆದಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ದೂರಿನಲ್ಲಿ 1 ರಿಂದ 9 ಜನರ ವಿರುದ್ದ ದೂರು ನೀಡಿರುತ್ತೆನೆ ಎಂದು ಹೇಳಿ ಬರೆಯಿಸಿರುತ್ತೆನೆ ಎಂದರೆ ಸರಿ. ಪೊಲೀಸರು ಎಮ್ ಓ.1 ಮತ್ತು 2 ನ್ನು ಘಟನಾ ಸ್ಥಳದಲ್ಲಿ ಇದ್ದವು ಅವುಗಳನ್ನು ಅಲ್ಲಿಯೇ ಜಪ್ತು ಮಾಡಿರುತ್ತಾರೆ ಎಂದರೆ ಸರಿ. ದಿಃ20-03-2023 ರಂದು ಇಪ್ತಿಯಾ ಸವಣೂರ, ನವಜ ಸವಣೂರ, ಜಾಕೀರ ಹುಸೇನ ಸವಣೂರ, ಬಾಬು ಸವಣೂರ ಮತ್ತು ಇರ್ಶಾದ ಸವಣೂರ ಇವರು ನನಗೆ ಅವಾಚ್ಯವಾಗಿ ಶಬ್ದಗಳಿಂದ ಬೈದು ಮನೆಯ ಹೋರಗಡೆ ಹೋಡೆ ಬಡೆ ಮಾಡಿದ್ದರು ಎಂದು ನಾನು ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ. ನಾನು ದೂರಿನಲ್ಲಿ 9 ಜನ ಆರೊಪಿತರ ಪೈಕಿ ಮೇಹಬುಬ ಅಲಿ ಎನ್ನುವ ವ್ಯಕ್ತಿಯ ಹೆಸರನ್ನು ಮೇಹಪುಸ ಎಂದು ಗಡಿಬಿಡಿಯಲ್ಲಿ ಬರೆಯಿಸಿದ್ದೆನು ಆದರೆ ಆತನ ಸರಿಯಾದ ಹೆಸರು ಮೇಹಬೂಬ ಅಲಿ ಎಂದು ಪೊಲೀಸರಿಗೆ ಬರೆಯಿಸಿರುತ್ತೆನೆ ಎಂದರೆ ಸರಿ. ದಿಃ20-03-2023 ರಂದು ಇಪ್ತಿಯಾ ಸವಣೂರ, ನವಜ ಸವಣೂರ, ಜಾಕೀರ ಹುಸೇನ ಸವಣೂರ, ಬಾಬು ಸವಣೂರ ಮತ್ತು ಇರ್ಶಾದ ಸವಣೂರ ಇವರು ನನಗೆ ಅವಾಚ್ಯವಾಗಿ ಶಬ್ದಗಳಿಂದ ಬೈದು ಮನೆಯ ಹೋರಗಡೆ ಹೋಡೆ ಬಡೆ ಮಾಡಿದ್ದರು ಎಂದು ನಾನು ಹೇಳಿಕೆ ನೀಡಿರುತ್ತೆನೆ ಎಂದು ಹೇಳಿಕೆ ಹೇಳಿದ್ದರು ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.3 ಎಂದು ಗುರುತಿಸಲಾಯಿತು.

**ಆರೋಪಿತ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.